# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂಪೈಎಸ್-1432/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ.
ಡಾ:ಅಂಬೇಡ್ಕರ್ ವೀದಿ.
ಬೆಂಗಳೂರು.
ದಿನಾಂಕ : 15/9/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಮೋಹನ್ ಬಿದರಿ, ವಲಯ ಅರಣ್ಯಾಧಿಕಾರಿ, ಶೃಂಗೇರಿ ವಲಯ. ಶ್ರೀ.ಮಂಜುನಾಥ್, ಅರಣ್ಯಾಧಿಕಾರಿ. ಶೃಂಗೇರಿ ವಲಯ, (3) ಶ್ರೀ.ಈಶ್ವರ್, ಫಾರೆಸ್ಟ್ ಗಾರ್ಡ್, ಶೃಂಗೇರಿ ವಲಯ. ಮತ್ತು (4) ಶ್ರೀ.ಮೊಹಮ್ಮದ್ ಮಮ್ತಾಜ್, ಕಂದಾಯ ನಿರೀಕ್ಷಕರು. ಹರಿಹರಪುರ. ಚಿಕ್ಕಮಗಳೂರು ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀಮತಿ.ಡಾಕಮ್ಮ ಕೋಂ ಲೇಟ್ ಅಣ್ಣೇಗೌಡ. ಬಿಲಗದ್ದೆ ಗ್ರಾಮ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಮೋಹನ್ ಬಿದರಿ, ವಲಯ ಅರಣ್ಯಾಧಿಕಾರಿ, ಶೃಂಗೇರಿ ವಲಯ, ಶ್ರೀ.ಮಂಜುನಾಥ್, ಅರಣ್ಯಾಧಿಕಾರಿ, ಶೃಂಗೇರಿ ವಲಯ, (3) ಶ್ರೀ.ಈಶ್ವರ್, ಫಾರೆಸ್ಟ್ ಗಾರ್ಡ್, ಶೃಂಗೇರಿ ವಲಯ, ಮತ್ತು (4) ಶ್ರೀ.ಮೊಹಮ್ಮದ್ ಮಮ್ತಾಜ್, ಕಂದಾಯ ನಿರೀಕ್ಷಕರು, ಹರಿಹರಪುರ, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ದೂರಿನಲ್ಲಿ ತಾನು ಸರ್ವೇ ನಂ. 223 ರಲ್ಲಿ 3 ರಿಂದ 5 ಗುಂಟೆ ಜಮೀನನ್ನು ತನ್ನ ಅತ್ತೆ ಮಾವನ ಕಾಲದಿಂದಲೂ ಅನುಭವಿಸಿಕೊಂಡು ಬಂದಿದ್ದೇನೆ. ಇದೇ ಗ್ರಾಮದ ರೆವೆನ್ಯೂ ಸೆಕ್ರೇಟರಿಯಾಗಿ ನಿವೃತ್ತಿ ಹೊಂದಿದ ಹಿರಿಯಣ್ಣನವರು ಸರ್ವೇ ನಂ. 137 ರಲ್ಲಿ 10 ಎಕರೆಗೂ ಮೇಲ್ಪಟ್ಟು ಸರ್ಕಾರಿ ಭೂಮಿಯನ್ನು ಅತ್ರಿಕ್ರಮಿಸಿಕೊಂಡಿದ್ದಲ್ಲದೆ, ಇವರು ಅತಿಕ್ರಮಿಸಿಕೊಂಡ ಜಾಗವನ್ನು ಅತಿಕ್ರಮಿಸಿಕೊಳ್ಳಲು ಪ್ರಯತ್ನ ಪಟ್ಟ ಕಾರಣ ಕೊಪ್ಪ ತಾಲ್ಲೂಕು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದ ಕಾರಣ ಹರಿಹರಪೂರದ ರಾಜಸ್ವ ನೀರಿಕ್ಷಕರಾದ 4ನೇ ಎದುರುದಾರರಿಗೆ ಅರ್ಜಿ ಕಳುಹಿಸಿದಾಗ, ಸದರಿಯವರು ನಿಯಮಾನುಸಾರ ಕ್ರಮ ಕೈಕೊಳ್ಳದೆ ಹಿರಿಯಣ್ಣಗೌಡರ ಜೊತೆ ಶಾಮೀಲಾಗಿ ಅರಣ್ಯಾಧಿಕರಿಗಳು ಹಾಗೂ ಹರಿಹರ ಠಾಣಾ ಪೊಲೀಸ್ ಸಿಬ್ಬಂದಿಯವರ ಜೊತೆ ಸೇರಿ ದಿನಾಂಕ: 30-04-2010 ರಲ್ಲಿ ಇವರ ಅನುಭವದಲ್ಲಿದಂತಹ ಸರ್ವೇ ನಂ. 273 ರಲ್ಲಿದ್ದ ಕೊಟ್ಟಿಗೆ ಮತ್ತು ತೆಂಗಿನ ಮರ ಎಲ್ಲವನ್ನು ಕುಲ್ಲಾಗೋಳಿಸಿರುತ್ತಾರೆ. ಹಿರಿಯಣ್ಣಗೌಡ ಇವರು ಅತಿಕ್ರಮಿಸಿದ ಪ್ರದೇಶವನ್ನು ತೆರವುಗೊಳಿಸದೇ 4ನೇ ಎದುರುದಾರರು ಅವರಿಗೆ ರಕ್ಷಣೆ ಕೊಡುತ್ತಿದ್ದ ಕಾರಣ ಇವರು

ಕೊಪ್ಪ ತಾಲ್ಲೂಕು ತಹಶೀಲ್ದಾರರು, ಚಿಕ್ಕಮಂಗಳೂರು ಉಪ–ವಿಭಾಗ ಉಪ–ವಿಭಾಗಾಧಿಕಾರಿಗಳಿಗೆ ಹಗೂ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಾಗ, ಅಂದಿನ ತಹಶಿಲ್ದಾರ ಲಿಂಗಪ್ಪ ಗೌಡರು ತಾಲ್ಲುಕು ಸರ್ವೇಯರ್‌ರಿಗೆ ಸರ್ವೇಯನ್ನು ನಡೆಸಿ ವರದಿ ಸಲ್ಲಿಸಲು ಆದೇಶಿಸಿದ್ದು, ಸದರಿಯವರು ಸರ್ವೇ ನಡೆಸಿದಾಗ ಸುಮರು 10 ಎಕರೆ 5 ಗುಂಟೆ ಅತಿಕ್ರಮಿಸಿದ್ದು ಕಂಡುಬರುತ್ತದೆ. ಇದನ್ನು ತೆರವುಗೊಳಿಸುವಂತೆ ಅಂದಿನ ಕೊಪ್ಪ ತಹಶೀಲ್ದಾರರು ದಿನಾಂಕ: 28–11–2012 ರಲ್ಲಿ ಆದೇಶಿಸಿದ್ದರೂ ಕೂಡಾ 4ನೇ ಎದುರುದಾರರು ಯವುಯದೇ ಕ್ರಮ ಕೈಕೊಳ್ಳಲಿಲ್ಲ. ಅರಣ್ಯ ಮತ್ತು ಕಂದಾಯ ಅಧಿಕಾರಿಗಳ ಬೇಜವ್ದಾರಿ ಮತ್ತು ಹಣದ ಪ್ರಭಾವದಿಂದ ಪ್ರಭಾರಿ ವ್ಯಕ್ತಿಗಳು ಸರ್ಕಾರಿ ಜಮೀನನ್ನು ಅನುಭವಿಸುತ್ತಿದ್ದು, ಈ ಬಗ್ಗೆ ಕ್ರಮ ಕೈಕೊಳ್ಳದೆ ಬಡ ಮಹಿಳೆಯಾದ ಇವರು ಅನುಭವಿಸಿಕೊಂಡಿದ್ದ 3 ರಿಂದ 5 ಗುಂಟೆ ಜಮೀನನ್ನು ಕಾನೂನು ಬಾಹಿರ ಎಂದು ಖುಲ್ಲಾಗೊಳಿಸಿರುತ್ತಾರೆ. ಈ ಬಗ್ಗೆ ಕ್ರಮ ಕೈಕೊಳ್ಳಬೇಕೆಂದು ಕೇಳಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ವಿಭಾಗ, ಇವರಿಗೆ ಆದೇಶಿಸಲಾಗಿತ್ತು. ಸದರಿಯವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಸ.ನಂ.223 ರಲ್ಲಿ 9.39 ಎಕರೆ ವಿಸ್ತೀರ್ಣ ಜಮೀನಿದ್ದು, ಸದರಿ ಜಮೀನು ದಿ.5/6/2002 ರಂತೆ ಅರಣ್ಯ ಇಲಾಖಾ ಉಸ್ತುವಾರಿಗೆ ವಹಿಸಲ್ಪಟ್ಟಿರುತ್ತದೆ ಹಾಗೂ ಸರ್ಕಾರಿ ಆದೇಶ ಸಂ.ಎಫ್‌ಇಇ 74 ಎಫ್‌ಎಫ್ 2006 ಬೆಂಗಳೂರು ದಿ.1/2/2007 ರಂತೆ ಮುಕ್ತವಾದ ಪ್ರದೇಶವನ್ನು ಹಾಗೂ ಮೀಸಲು ಅರಣ್ಯ ರಚಿಸುವಲ್ಲಿ ಸೂಕ್ತ ಪ್ರದೇಶಗಳನ್ನು ಮೋಜಣಿ ಮಾಡಿ ಕರ್ನಾಟಕ ಅರಣ್ಯ ಕಾಯಿದೆಯಡಿಯಲ್ಲಿ ಘೋಷಿಸಲಾಗಿರುತ್ತದೆ ಹಾಗೂ ಸ.ನಂ.223 ಅರಣ್ಯ ಇಲಾಖೆಗೆ ಹಸ್ತಾಂತರವಾದ್ದರಿಂದ ಯಾವುದೇ ಹೊಸ ಅರಣ್ಯೇತರ ಚಟುವಟಿಕೆಗಳಿಗೆ ಸದರಿ ಪ್ರದೇಶ ಡಿನೋಟಿಫೈ ಆಗದ ಹೊರತು ಪುರಸ್ಕರಿಸಲು ಸಾಧ್ಯವಿಲ್ಲ. ಸ.ನಂ.215 ರಲ್ಲಿ ಒಟ್ಟು ವಿಸ್ತೀರ್ಣ 312.20 ಎಕರೆ ಇದ್ದು, ಅದರಲ್ಲಿ 150.20 ಎಕರೆ ಮಾತ್ರ ಕರ್ನಾಟಕ ಅರಣ್ಯ ಕಾಯಿದೆಯಡಿಯಲ್ಲಿ ಘೋಷಿತವಾಗಿದ್ದು, ಸೆಟಲ್‌ಮೆಂಟ್ ಕಾರ್ಯ ಬಾಕಿ ಇರುತ್ತದೆ. ಶ್ರೀ.ಹಿರಿಯಣ್ಣ ಬಿನ್ ದೇಕಣ್ಣ ಹಾಗೂ ರಕ್ಷಿತ್ ಇವರು ಸ.ನಂ.137 ರಲ್ಲಿ 10 ಎಕರೆ ಒತ್ತುವರಿ ಮಾಡಿದ್ದು, ಖುಲ್ಲಾ ಗೊಳಿಸುವ ಬಗ್ಗೆ ಹಿರಿಯಣ್ಣ ಹಾಗೂ ದೂರುದಾರರು ದಾಯಾದಿಗಳಾಗಿದ್ದು, ಸದರಿಯವರ ಮಗ ಸತೀಶ್ ಎಂಬಾತನ ಮೇಲೆ ವೈಯಕ್ತಿಕವಾದ ವಿಚಾರದಿಂದ ಹಗೆತನ ಹಾಗೂ ಡಾಕಮ್ಮ ಇವರ ಶೆಡ್ಡನ್ನು ಕೀಳಿಸಿದ್ದು, ಹಿರಿಯಣ್ಣಗೌಡ ಹಾಗೂ ಇತರರೆ ಎಂದು ತೀರ್ಮಾನಕ್ಕೆ ಬಂದು ಡಾಕಮ್ಮ ಇವರ ಮುಖಾಂತರ ಸತೀಶ್ ಎಂಬಾತನು ಅರ್ಜಿಯನ್ನು ತಹಶೀಲ್ದಾರ್‌ರವರಿಗೆ ಸಲ್ಲಿಸಿರುವುದಾಗಿರುತ್ತದೆ. ದೂರುದಾರರು ಹೇಳಿರುವಂತೆ ಅರಣ್ಯ ಇಲಾಖೆಯವರು ಯಾವುದೇ ತೆಂಗಿನ ಮರ ಅಥವಾ ಕೊಟ್ಟಿಗೆಯನ್ನು ಹಾಳು ಮಾಡಿರುವುದಿಲ್ಲ. ಸದರಿ ಖುಲ್ಲಾಗೊಳಿಸುವಿಕೆ ಕಂದಾಯ ಇಲಾಖೆಯವರ ಕ್ರಮವಾಗಿದ್ದು, ಅರಣ್ಯ ರಕ್ಷಕ ಮತ್ತು ಉಪ ಅರಣ್ಯ ವಲಯಾಧಿಕಾರಿಗಳು ಮಹಜರ್ ಕ್ರಮಕ್ಕೆ ಸಹಕರಿಸಿರುತ್ತಾರೆ. ಶ್ರೀಮತಿ.ಡಾಕಮ್ಮ ಹಾಗೂ ಅವರ ಸೊಸೆ ಭವಾನಿ ಇವರು ದೂರು ಅರ್ಜಿಯಲ್ಲಿ ಹೇಳಿದ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾಗಿದ್ದು ಸದರಿಯವರು 5 ಗುಂಟೆ ಪ್ರದೇಶವನ್ನು ಬಿಲಗದ್ದೆ ಗ್ರಾಮದ ಸ.ನಂ.223 ರಲ್ಲಿ ಸುಮಾರು 70 ವರ್ಷಗಳಿಂದ ಅನುಭವಿಸಿಕೊಂಡು ಬಂದಿರುವುದಕ್ಕೆ ಸ್ಥಳ

ಪರಿಶೀಲಿಸಿದಂತೆ ಯಾವುದೇ ಕುರುಹುಗಳಿಲ್ಲ. ಸದರಿಯವರು 2006 ರಿಂದ ಈಚೆಗೆ ಒತ್ತುವರಿ ಪ್ರಯತ್ನ ಮಾಡಿದ್ದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆಯೆಂದು ಹೇಳಿರುತ್ತಾರೆ.

4) ತನಿಖಾಧಿಕಾರಿಯ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಭೂ ಒತ್ತುವರಿ ಮಾಡಿರುವ ಹಿರಿಯಣ್ಣಗೌಡ ಮತ್ತು ರಕ್ಷಿತ್ ಇವರು ಅಧಿಕಾರಿಗಳನ್ನು ಬಳಸಿಕೊಂಡು ಅವರಿಗೆ ಕಿರುಕುಳ ಕೊಡುತ್ತಿರುವುದಲ್ಲದೆ 3ನೇ ವ್ಯಕ್ತಿಗಳಿಂದ ಬೆದರಿಕೆ ಹಾಕುತ್ತಿರುವುದಾಗಿದೆ. ಫಾರೆಸ್ಟರ್ ಮಂಜುನಾಥ್, ಈಶ್ವರ್ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳನ್ನು ಬಳಸಿಕೊಂಡು ಕಾನೂನು ಬಾಹಿರವಾಗಿ 3ನೇ ವ್ಯಕ್ತಿಗಳಿಗೆ ಮನೆ ನಿರ್ಮಿಸಿಕೊಳ್ಳಲು ಜೆ.ಸಿ.ಬಿ.ಯಿಂದ ಮಣ್ಣು ತೆಗೆದು ಕಾಮಗಾರಿ ನಡೆಸುತ್ತಿದ್ದಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಅರಣ್ಯ ಮತ್ತು ಕಂದಾಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರೂ ಸಹ ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ. ಹಿರಿಯಣ್ಣಗೌಡ ಮತ್ತು ರಕ್ಷಿತ್ ಇವರು ಸುಮಾರು 10 ಎಕರೆ 5 ಗುಂಟೆ ಸರ್ಕಾರಿ ಭೂಮಿ ಮತ್ತು ಕೆರೆಯನ್ನು ಅತಿಕ್ರಮಿಸಿಕೊಂಡಿದ್ದರೂ ಸಹ ಅಧಿಕಾರಿಗಳು ಕ್ರಮ ಕೈಗೊಳ್ಳದೆ ರಕ್ಷಣೆ ನೀಡುತ್ತಿದ್ದಾರೆಂದು ಹೇಳಿರುತ್ತಾರೆ.

5) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸರ್ಕಾರಿ ಜಾಗದಲ್ಲಿ ಜೆ.ಸಿ.ಬಿ.ಯಿಂದ ಕಾಮಗಾರಿ ನಡೆಸುತ್ತಿದ್ದಾರೆ ಮತ್ತು ಸರ್ಕಾರಿ ಜಮೀನನ್ನು ಅತಿಕ್ರಮಿಸಿಕೊಂಡವರ ಬಗ್ಗೆ ಅಧಿಕಾರಿಗಳು ಯಾವುದೇ ಕ್ರಮವನ್ನು ಕೈಗೊಂಡಿಲ್ಲವೆಂದು ಹೇಳಿರುವುದು ಕಂಡುಬರುತ್ತದೆ. ಆದ್ದರಿಂದ, ದೂರುದಾರರ ದೂರಿನ ಬಗ್ಗೆ ಜಂಟಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ಹಾಗೂ ಉಪ ವಿಭಾಗಾಧಿಕಾರಿ, ಕೊಪ್ಪ ಉಪ ವಿಭಾಗ, ಇವರಿಗೆ ಆದೇಶಿಸಲಾಗಿತ್ತು.

6) ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಹಾಗೂ ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ ಇವರು ಜಂಟಿ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುತ್ತಾರೆ.

i. ಅರ್ಜಿದಾರರಾದ ಶ್ರೀಮತಿ.ಡಾಕಮ್ಮ ಕೋಂ ಅಣ್ಣೇಗೌಡ ಇವರು ಸ.ನಂ.137 & 223 ಕ್ಕೆ ಸೇರಿದ ಸರ್ಕಾರಿ ಜಾಗಕ್ಕೆ ಸುಮಾರು 100 ಅಡಿ ದೂರದಲ್ಲಿ ಸ್ವಂತ ಹಿಡುವಳಿ ಜಾಗವಿದ್ದರೂ ಸುಮಾರು 10 ಗುಂಟೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಅದರಲ್ಲಿ ಶೆಡ್ ನಿರ್ಮಿಸಿಕೊಂಡು ವಾಸವಾಗಿರುತ್ತಾರೆ. ಇದು ಮೇಲ್ನೋಟಕ್ಕೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡುವ ಉದ್ದೇಶವೆ ಆಗಿರುವುದಾಗಿ ಸ್ಥಳ ಪರಿಶೀಲನೆ, ಮಾಹಿತಿ ಮತ್ತು ದಾಖಲಾತಿಯಿಂದ ತಿಳಿದು ಬಂದಿರುತ್ತೆ.

ii. ಅರ್ಜಿದಾರರಾದ ಶ್ರೀಮತಿ.ಡಾಕಮ್ಮ ಕೋಂ ಅಣ್ಣೇಗೌಡ ಇವರು ಸ.ನಂ.137 & 223 ರ ಸರ್ಕಾರಿ ಜಾಗಕ್ಕೆ ಸುಮಾರು 100 ಅಡಿ ದೂರದಲ್ಲಿ ಸ್ವಂತ ನಿವೇಶನದಲ್ಲಿದ್ದ ಮನೆಯನ್ನು ನೆಲಸಮ ಮಾಡಿ ಸುಮಾರು 10 ಗುಂಟೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಅದರಲ್ಲಿ ಶೆಡ್ ನಿರ್ಮಿಸಿರುತ್ತಾರೆ.

iii. ಅರ್ಜಿದಾರರ ಶೆಡ್‌ನ (ವಾಸದ ಮನೆ) ಪಕ್ಕದಲ್ಲಿರುವ ವಿವಾದಿತ ದ್ವಿತೀಯಾರ್ಧದಲ್ಲಿರುವ ಜಾಗದಲ್ಲಿ ಎದುರುದಾರರಾದ ಹಿರಿಯಣ್ಣಗೌಡ ಮತ್ತು ಅವರ ಮಗ ರಕ್ಷಿತ ಇವರು ಅರ್ಜಿದಾರರಿಗೆ ಪ್ರತಿ ಸ್ಪರ್ದೆ ಮತ್ತು ಪೈಪೋಟಿಯಾಗಿ ಕೊಟ್ಟಿಗೆಯನ್ನು ಕಟ್ಟಿರುವುದು ಮಾಹಿತಿ ಮತ್ತು ಸ್ಥಳ ಪರಿಶೀಲನೆಯಿಂದ ತಿಳಿದು ಬಂದಿರುತ್ತೆ.

iv. ಬಿಲಗದ್ದೆ ವಾಸಿ ಹಿರಿಯಣ್ಣಗೌಡ, ಅವರ ಅಣ್ಣ ಡೇಕಣ್ಣಗೌಡ ಮತ್ತು ಮಗ ರಕ್ಷಿತ ಇವರು ಸ.ನಂ.137 ಮತ್ತು 223 ಕ್ಕೆ ಸೇರಿದ ಸುಮಾರು 10–15 ಎಕರೆ ಸರ್ಕಾರಿ ಗೋಮಾಳವನ್ನು ಒತ್ತುವರಿ ಮಾಡಿಕೊಂಡಿದ್ದು, ಸದರಿ ಒತ್ತುವರಿಯನ್ನು 2014ನೇ ಸಾಲಿನಲ್ಲಿ ತೆರವು

ಮಾಡಿರುವುದು ದಾಖಲಾತಿಗಳು ಮತ್ತು ಅಧಿಕಾರಿಗಳು ನೀಡಿದ ಮಾಹಿತಿಯಿಂದ ತಿಳಿದು ಬಂದಿರುತ್ತೆ.

v. ಜಿಲಗದ್ದೆ ವಾಸಿ ಹಿರಿಯಣ್ಣಗೌಡ, ಅವರ ಅಣ್ಣ ಡೇಕಣ್ಣಗೌಡ ಮತ್ತು ಮಗ ರಕ್ಷಿತ ಇವರು ಒತ್ತುವರಿ ಮಾಡಿಕೊಂಡಿದ್ದ ಸ.ನಂ.137 & 223 ಕ್ಕೆ ಸೇರಿದ ಸುಮಾರು 10-15 ಎಕರೆ ಸರ್ಕಾರಿ ಗೋಮಾಳವನ್ನು 2014ನೇ ಸಾಲಿನಲ್ಲಿ ತೆರವು ಮಾಡಿದ್ದರೂ ಸಹ ನಂತರ ಇವರುಗಳ ಜಮೀನಿನ ಅಂಚಿಗೆ ಹೊಂದಿಕೊಂಡಿರುವ ಸ್ವಲ್ಪ ಸರ್ಕಾರಿ ಜಾಗವನ್ನು ಪುನಃ ಒತ್ತುವರಿ ಮಾಡಿಕೊಂಡು ಬೇಲಿ ಮಾಡಿರುವುದಾಗಿ ಸ್ಥಳ ಭೇಟಿ ಸಮಯದಲ್ಲಿ ಕೆಲವು ಸ್ಥಳೀಯರು ಮತ್ತು ಕಂದಾಯ ಇಲಾಖೆ ಸಿಬ್ಬಂದಿಗಳು ನೀಡಿದ ಮಾಹಿತಿಯಿಂದ ತಿಳಿದು ಬಂದಿರುತ್ತೆ.

vi. ಜಿಲಗದ್ದೆ ವಾಸಿ ಹಿರಿಯಣ್ಣಗೌಡ, ಅವರ ಅಣ್ಣ ಡೇಕಣ್ಣಗೌಡ ಮತ್ತು ಮಗ ರಕ್ಷಿತ ಇವರು ಸ್ಥಳೀಯವಾಗಿ ಪ್ರಭಾವಿಗಳೆಂದು ತಿಳಿದು ಬಂದಿದ್ದು, ತೆರವು ಮಾಡಿದ್ದರೂ ಸಹ ಪುನಃ ಜಮೀನಿನ ಅಂಚಿಗೆ ಹೊಂದಿಕೊಂಡಿರುವ ಸ್ವಲ್ಪ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವುದಾಗಿ ತಿಳಿದು ಬಂದಿರುತ್ತೆ.

vii. ಅರ್ಜಿದಾರರು ಸ.ನಂ.137 & 223 ರಲ್ಲಿನ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ನಿರ್ಮಾಣ ಮಾಡಿರುವ ಮನೆಗೆ ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕ, ಮನೆ ನಂಬರ್ ನೀಡಿದ್ದು, ಇವರಿಗೆ ಬದಲಿ ವ್ಯವಸ್ಥೆ ಮಾಡಿ ಒತ್ತುವರಿಯನ್ನು ತೆರವು ಗೊಳಿಸಬಹುದಾಗಿರುತ್ತೆ.

viii. ಅರ್ಜಿದಾರರು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಮಾಡಿಕೊಂಡು ವಾಸವಾಗಿದ್ದು, ಸದರಿ ಜಾಗವನ್ನು ಕಲಂ 94 ಸಿ ರೀತ್ಯ ಮಂಜೂರು ಮಾಡಿಕೊಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದು, ತಹಶೀಲ್ದಾರ್‌ರವರು ವಾಸದ ಮನೆ ಇರುವ ಜಾಗವನ್ನು ಅಕ್ರಮ ಸಕ್ರಮ ಅಡಿಯಲ್ಲಿ ಮಂಜೂರು ಮಾಡಿ ಅವರಿಗೆ ದಂಡ ವಿಧಿಸಿ ವಸೂಲಿ ಮಾಡಬಹುದಾಗಿರುತ್ತೆ.

ix. ಅರ್ಜಿದಾರರು ಅರ್ಜಿಯಲ್ಲಿ ಆಪಾದಿಸಿರುವಂತೆ ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಳ್ಳಲು ಎದುರುದಾರರಿಗೆ ಸಹಕರಿಸಿರುತ್ತಾರೆ ಎಂಬ ಆರೋಪಕ್ಕೆ ಪೂರಕವಾದ ಸಾಕ್ಷ್ಯಗಳು ಕಂಡುಬಂದಿರುವುದಿಲ್ಲ. ಇದು ಮೇಲ್ನೋಟಕ್ಕೆ ಸುಳ್ಳು ಮತ್ತು ಸತ್ಯಕ್ಕೆ ದೂರವಾದದ್ದು ಎಂದು ತಿಳಿದು ಬಂದಿರುತ್ತೆ.

x. ಹಿರಿಯಣ್ಣಗೌಡ, ಅವರ ಅಣ್ಣ ಡೇಕಣ್ಣಗೌಡ ಮತ್ತು ಮಗ ರಕ್ಷಿತ ಇವರು ಒತ್ತುವರಿ ಮಾಡಿಕೊಂಡಿದ್ದ ಜಿಲಗದ್ದೆ ಗ್ರಾಮದ ಸ.ನಂ.137 & 223 ರಲ್ಲಿನ ಸರ್ಕಾರಿ ಜಮೀನನ್ನು ತೆರವು ಮಾಡಿದ್ದರೂ ಸಹ ಜಮೀನಿನ ಅಂಚಿಗೆ ಹೊಂದಿಕೊಂಡಿರುವ ಸ್ವಲ್ಪ ಸರ್ಕಾರಿ ಜಾಗವನ್ನು ಪುನಃ ಒತ್ತುವರಿ ಮಾಡಿಕೊಂಡಿರುವುದಾಗಿ ಸ್ಥಳೀಯರು ಮತ್ತು ಕೆಲವು ಸಿಬ್ಬಂದಿಗಳು ಮಾಹಿತಿ ನೀಡಿರುವುದರಿಂದ ಈ ಕುರಿತು ಪುನಃ ಸರ್ವೆ ಮಾಡಿಸಿ ಒತ್ತುವರಿಯಾಗಿರುವುದು ಕಂಡುಬಂದಲ್ಲಿ ಸದರಿ ಒತ್ತುವರಿ ಮಾಡಿರುವ ಸರ್ಕಾರಿ ಜಾಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತೆ ಎಂದು ಅಭಿಪ್ರಾಯ ನೀಡಿರುತ್ತಾರೆ.

7) ತನಿಖಾ ವರದಿಯ ಪ್ರತಿಯನ್ನು ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ ಇವರಿಗೆ ಕಳುಹಿಸಿ ಆ ಬಗ್ಗೆ ವರದಿ ನೀಡುವಂತೆ ಆದೇಶಿಸಲಾಗಿತ್ತು. ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಕೊಪ್ಪ ತಾಲ್ಲೂಕು, ಹರಿಹರ ಪುರ ಹೋಬಳಿ, ಜಿಲಗದ್ದೆ ಗ್ರಾಮದ ಸ.ನಂ.137, 223 ರಲ್ಲಿ ಡೇಕಣ್ಣಗೌಡ, ಹಿರಿಯಣ್ಣಗೌಡ ಇವರುಗಳು 10.05 ಎಕರೆ ಒತ್ತುವರಿ ಮಾಡಿರುವ ಬಗ್ಗೆ ಒತ್ತುವರಿ ತೆರವುಗೊಳಿಸಿ ವರದಿಯನ್ನು ಪತ್ರ ಸಂ.ಒತ್ತುವರಿ ಸಿಆರ್ 24/2015-16 ದಿ.28/11/2016, 11/4/2017 ಮತ್ತು 6/5/2017 ರಂದು ಚಿಕ್ಕಮಗಳೂರು ಲೋಕಾಯುಕ್ತ ಕಚೇರಿ ಮೂಲಕ ಸರ್ವೆ ನಕ್ಷೆ ಹಾಗೂ ರಾಜಸ್ವ ನಿರೀಕ್ಷಕರ ವರದಿಯೊಂದಿಗೆ ಸಲ್ಲಿಸಿರುವುದಾಗಿ ಪತ್ರದ ಮೂಲಕ ತಿಳಿಸಿರುತ್ತಾರೆ. ಆದ್ದರಿಂದ, ಈಗಾಗಲೇ

ತಹಶೀಲ್ದಾರ್, ಕೊಪ್ಪ ರವರು ವರದಿಯನ್ನು ಸಲ್ಲಿಸಿರುವ ಮೇರೆಗೆ ಪ್ರಕರಣವನ್ನು ಮುಕ್ತಾಯ ಮಾಡಬೇಕಾಗಿ ಕೋರಿರುತ್ತಾರೆ.

8) ದೂರುದಾರರು ತಮ್ಮ ಪತ್ರದಲ್ಲಿ ಹಿರಿಯಣ್ಣಗೌಡ ಹಾಗೂ ಅವರ ಮಗ ರಕ್ಷಿತ್ ಇವರು ಸ.ನಂ.137 ರಲ್ಲಿ ಕೆರೆಯನ್ನು ಮತ್ತು ಸರ್ಕಾರಿ ಜಮೀನನ್ನು ಅತಿಕ್ರಮಿಸಿಕೊಂಡಿರುತ್ತಾರೆ. ದೂರುದಾರರು ಅನಾದಿಕಾಲದಿಂದಲೂ 3 ರಿಂದ 10 ಗುಂಟೆಯನ್ನು ಅನುಭವಿಸಿಕೊಂಡು ಬಂದಿದ್ದು, ಅದನ್ನು ಕಾನೂನು ಬಾಹಿರವೆಂದು ಒಕ್ಕಲೆಬ್ಬಿಸಲು ಕಿರುಕುಳ ನೀಡಿರುತ್ತಾರೆ. ಭೂ ಒತ್ತುವರಿದಾರರು ಒತ್ತುವರಿ ಮಾಡಿರುವ 15 ಎಕರೆ ಜಮೀನನ್ನು ಇಲ್ಲಿಯವರೆಗೂ ತೆರವುಗೊಳಿಸಿರುವುದಿಲ್ಲವೆಂದು ಹೇಳಿರುತ್ತಾರೆ.

9) ಉಪ ವಿಭಾಗಾಧಿಕಾರಿ, ಕಂದಾಯ ಉಪ ವಿಭಾಗ, ಚಿಕ್ಕಮಗಳೂರು ಇವರು ತಮ್ಮ ವರದಿಯಲ್ಲಿ ದೇಕಣ್ಣಗೌಡ ಮತ್ತು ಹಿರಿಯಣ್ಣಗೌಡ ಇವರುಗಳು ಒತ್ತುವರಿ ಮಾಡಿರುವ 10.05 ಎಕರೆ ಜಮೀನನ್ನು ತೆರವುಗೊಳಿಸಲಾಗಿದೆಯೆಂದು ತಿಳಿಸಿರುತ್ತಾರೆ. ದೂರುದಾರರು ಪ್ರತ್ಯುತ್ತರದ ಜೊತೆ ಹಾಜರು ಪಡಿಸಿರುವ ಭಾವಚಿತ್ರಗಳನ್ನು ಪರಿಶೀಲಿಸಿದಾಗ, ಕೆಲವು ಜಮೀನುಗಳಲ್ಲಿ ರಸ್ತೆ ಹಾಗೂ ಕೆಲವು ಕಡೆ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿರುವುದು ಕಂಡುಬರುತ್ತದೆ. ಆದರೆ ಸದರಿ ರಸ್ತೆ ಮತ್ತು ಕಟ್ಟಡ ಯಾವ ಸರ್ವೆ ನಂಬರ್ ಜಮೀನಿನಲ್ಲಿದೆಯೆಂದು ಹೇಳಲು ಭಾವಚಿತ್ರದ ಆಧಾರದಲ್ಲಿ ಸಾಧ್ಯವಿಲ್ಲ. ಒತ್ತುವರಿದಾರರನ್ನು ತೆರವುಗೊಳಿಸಲಾಗಿದೆಯೆಂದು ವರದಿ ನೀಡಿದ್ದರೂ ಸಹ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ಹೂಡಲಾಗಿರುವ ಬಗ್ಗೆ ಯಾವುದೇ ಅಂಶವನ್ನು ಉಲ್ಲೇಖಿಸಿರುವುದಿಲ್ಲ. ಅದೇರೀತಿ ಬಿಲಗದ್ದೆ ಗ್ರಾಮದ ಸ.ನಂ.137 ಮತ್ತು 223 ರ ದಾಖಲಾತಿಗಳು ಯಾರ ಹೆಸರಿನಲ್ಲಿ ದಾಖಲಾಗಿರುತ್ತವೆ ಎನ್ನುವ ಬಗ್ಗೆ ಕೂಡ ಯಾವುದೇ ಅಂಶಗಳು ಕಂಡುಬರುತ್ತಿಲ್ಲ.

10) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸ.ನಂ.137 ಮತ್ತು 223 ರಲ್ಲಿರುವ ಸರ್ಕಾರಿ ಜಮೀನನ್ನು ಗುರುತಿಸಿ, ಸರ್ಕಾರಿ ಜಮೀನಿನಲ್ಲಿ ಯಾವುದಾದರೂ ಒತ್ತುವರಿ ಕಂಡುಬಂದಲ್ಲಿ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ಹೂಡುವ ಜೊತೆಗೆ ಸೂಕ್ತ ಕ್ರಮಕೈಗೊಂಡು, ಸರ್ಕಾರಿ ಸ್ವತ್ತಿನ ಜಮೀನಿನ ಕಂದಾಯ ದಾಖಲೆಗಳನ್ನು ಸರ್ಕಾರದ ಹೆಸರಿನಲ್ಲಿ ನಮೂದಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 15/9/17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**